ವರ್ಷ ನನ್ನೊಡನೆ ಸಂಸಾರ ಮಾಡಿ ನಾನು ಎಂಥವನು ಎಂದು ಗೊತ್ತಿಲ್ಲವೇ?'

ಕೆನ್ನೆ ಚುರುಗುಟ್ಟಿದಾಗಲೇ ಅವರು ನನ್ನ ಹೊಡೆದಿದ್ದರ ಅರಿವಾಗಿದ್ದು. ಕಿವಿ ಗುಂಯ್ಗುಟ್ಟಿತು. ಬಲಗೆನ್ನೆಯ ಮೇಲೆ ಕೈಯಿರಿಸಿ ಅವರತ್ತ ನೋಡಿದೆ. ಎಡಗೆನ್ನೆಗೆ ಏಟು. ಆ ಏಟಿನ ರಭಸಕ್ಕೆ ನನ್ನ ತಲೆ ಗೋಡೆಗೆ ಹೊಡೆಯಿತು. ಕಂಗಳಲ್ಲಿ ನೀರು ತುಂಬಿಕೊಳ್ಳತೊಡಗಿತು. ಭುಜಕ್ಕೆ ಒಂದು ಏಟು... ಹಾಗೇ ಕುಸಿದು ಕುಳಿತೆ.

'ಸರ್... ಬೇಡ.. ಹೊಡಿಬೇಡಿ. ಪ್ರಾಬ್ಲಂ ಆಗುತ್ತೆ...' ರಂಗಸ್ವಾಮಿ ಅಡ್ಡ ಬರದಿದ್ದರೆ ಇನ್ನೆಷ್ಟು ಏಟು ಬೀಳುತ್ತಿತ್ತೋ... ಅವರ ಫೋನ್ ರಿಂಗಾಗ ತೊಡಗಿತ್ತು. ಹಾಗಾಗಿ ಹೊಡೆತ ನಿಂತಿತು.

'ಹಲೋ ಹೂಂ... ಥ್ಯಾಂಕ್ಸ್.. ಇಲ್ಲೇ ಇದೀನಿ.. ಸರಿ ಸರಿ ನೀವು ಅರ್ಧ ಗಂಟೆ ಬಿಟ್ಟು ಬನ್ನಿ... ಇಲ್ಲ.... ನಾನು ಕರೆದುಕೊಂಡು ಹೋಗಲ್ಲ.. ಐ ಹ್ಯಾವ್ ಅದರ್ ಪ್ಲಾನ್ಸ್ ಶಿ ಈಸ್ ಎ ಬಿಚ್... ನಾಯಿ! ನಾಯಿ ಅವಳು... ನಾನು ಬಂದಿರುವುದು ಯಾರಿಗೂ ಹೇಳಬಾರದು...'

ವಿಕ್ರಂ ಹಳ್ಳಿಮನೆಯ ಈ ರೂಪ, ಈ ಅನಾಗರಿಕ ರೂಪ ಹೊಸತು ನನಗೆ...

ನಾನಿಲ್ಲಿ ಇರುವುದನ್ನು ಪೊಲೀಸರೇ ಹುಡುಕಿ, ಅವರು ಬರದೆ, ಇವರಿಗೆ ಹೇಳಿದ್ದಾರೆ.. ನನಗೆ ಬುದ್ಧಿ ಹೇಳಲು, ಹೊಡೆಯಲು ಇವರು ತಮ್ಮ ಚೇಲಾನನ್ನು ಕರೆದುಕೊಂಡು ಬಂದಿದ್ದಾರೆ. ಇನ್ನರ್ಧ ಗಂಟೆ ಬಿಟ್ಟುಕೊಂಡು ಪೊಲೀಸರು ಬಂದು ಏನು ಮಾಡುತ್ತಾರೆ?.. ಮೂವತ್ತು ನಾಲ್ಕು ವರ್ಷದ ಹೆಂಗಸು ಅವಳು ಬೇಕಾದ ಕಡೆ ಇರುವ ಹಾಗೆ ಇಲ್ಲವೇ?.. ಈಗ ವಿಕ್ರಂ ಹೇಳಿದರೆ ವಿಶ್ವಾಸನನ್ನು ಬಂಧಿಸಿ ಬಿಡ್ತಾರೇನೋ ಈ ಪೊಲೀಸರು...

'ವಿಕ್ರಂ... ಪ್ಲೀಸ್... ವಿಶ್ವಾಸ್‌ಗೆ ಏನೂ ಮಾಡೋದು ಬೇಡ... ನಾನು... ನಾನು.. ಇನ್ನೆಂದೂ ಅವನ ಮುಖವನ್ನೇ ನೋಡುವುದಿಲ್ಲ.. ಅವನೊಂದಿಗೆ ಮಾತನಾಡುವುದಿಲ್ಲ.. ನನಗೆ ಒಂದು ಕೆಲಸ ಸಿಕ್ಕಿದೆ.. ನನ್ನ ಪಾಡಿಗೆ ನಾನು ಕೆಲಸ ಮಾಡಿಕೊಂಡು ಇರುತ್ತೇನೆ... ಪ್ಲೀಸ್...'

'ವಿಶ್ವಾಸ್!.. ಆ ಸೂಳೆ ಮಗನ ಯೋಚನೆ ನೀನು ಮಾಡಬೇಡ... ಅವನನ್ನು ನೋಡುವುದಿಲ್ಲ ಎಂದು ನಿರ್ಧರಿಸಲು ನೀನ್ಯಾರು?... ನಿಂಗೆ ಬೇಕು ಅನ್ನಿಸಿದರೂ ಅವನನ್ನು ನೋಡಲಾಗುವುದಿಲ್ಲ..'

'ಪ್ಲೀಸ್...' ಗಾಬರಿಯಿಂದ ನನ್ನ ಎದೆ ಡವಗುಟ್ಟಿತು... ಕಂಗಳು ಕತ್ತಲುಗಟ್ಟಿತ್ತು...

'ಪ್ಲೀಸ್.. ಬೇಕಾದರೆ.. ನಾನು ಮನೆಗೆ ಹಿಂತಿರುಗಿ ಬರುತ್ತೇನೆ. ವಿಶ್ವಾಸ್‌ನ ಬಿಟ್ಟುಬಿಡಿ... ಬೇಕಾದರೆ.. ಬೇರೆ ಯಾವುದಾದರೂ ದೇಶಕ್ಕೆ ಹೋಗು ಅಂತ ಹೇಳಿ ಕಳಿಸಿಬಿಡಿ'

ನಕ್ಕರೆ ಅವರು?... ನನಗೆ ಸರಿಯಾಗಿ ಕೇಳಿಸುತ್ತಿಲ್ಲ... ಕತ್ತಲಾವರಿಸಿದ ಕಂಗಳಿಗೆ ಕಾಣಿಸುತ್ತಿಲ್ಲ... ಕೆನ್ನೆಗೆ ಏಟು ಬಿದ್ದಿದ್ದರೆ ಪರಿಣಾಮವೇ?...

'ಹೋಗು ಅಂದರೆ ಹೋಗಿಬಿಡ್ತಾನಾ?'

ಅವನ ಪ್ರೇಯಸಿನ ನಾನು.... ಅವರ ಮಾತು ಕೇಳಿಸುತ್ತಿಲ್ಲ ಸರಿಯಾಗಿ... ನಾನು ಹೇಳಬೇಕಾದ್ದು ಹೇಳಿ ಬಿಡಬೇಕು...

'ಪ್ಲೀಸ್... ನಾನು ಹೇಳ್ತೀನಿ ಅವನ್ಗೆ... ನಾನು ಚೆನ್ನಾಗಿರಬೇಕು ಅಂದರೆ ನೀನು ದೇಶ ಬಿಟ್ಟು ಹೋಗಬೇಕು ಅಂತ ಹೇಳ್ತೀನಿ...'

'ಆಗ ಅವನು ಹೋಗಿ ಬಿಡ್ತಾನೆ... ಕೇಳಿದ್ಯ ರಂಗಸ್ವಾಮಿ!.... ಇವರದು ಲೈಲಾ ಮಜ್ನು ತರಹ ಅಮರ ಪ್ರೇಮ... ನಾನು... ಇವಳ ಗಂಡ, ಇವಳ ಮಕ್ಕಳ ತಂದೆ... ಈ ಪ್ರೇಮಕಥೆಗೆ ಖಳ/ವಿಲನ್.../ ನೀನು ಹಿಂತಿರುಗಿ ಬರ್ತೀನಿ ಅಂದರೆ ಕರೆದುಕೊಂಡು ಹೋಗ್ತೀನಿ ಅಂತ ಅಂದುಕೊಂಡಿದ್ಯ?... ಕಳೆದ ಮೂರು ದಿನದಿಂದ ಎಷ್ಟು ಅವಮಾನ ಅನುಭವಿಸಿದ್ದೇನೆ ಎಂಬ ಕಲ್ಪನೆಯಾದರೂ ಇದೆಯಾ ನಿಂಗೆ?... ಮೊದಲ ಗೆಲುವಿನ ಸವಿಯನ್ನೂ ಸವಿಯಲೂ ಬಿಡದ ನಿನಗೆ ನರಕ ತೋರಿಸದೆ ಬಿಡುತ್ತೇನೆ ಅಂದುಕೊಂಡಿದ್ಯ...? ಯಾವಳೋ ಅವಳು?.. ನಿನ್ನ ಅಸಿಸ್ಟೆಂಟು... ಮೀರಾ... ಹೂಂ ಆ ಮೀರಾ ನಿಂಗೆ ಹೇಳಿದ್ಲಂತೆ ಹೋಗಬೇಡಿ ಮೇಡಂ.. ಸಾಹೇಬ್ರಿಗೆ ಇಷ್ಟ ಆಗೊಲ್ಲ ಅಂತ... ಅವಳಿಗೆ ಗೊತ್ತಾಗಿದ್ದು ನಿಂಗೆ ಗೊತ್ತಾಗಲಿಲ್ಲವೇ?... ಹೀಗೆ ಯಾವನೋ ಹಿಂದೆ ನೀನು ಹೊರಟು ಹೋದರೆ ನಾನು ಸುಮ್ಮನೆ ಇರ್ತೇನೆ ಅಂತ ಹೇಗೆ ಅಂದು ಕೊಂಡೆ?... ದಿನಕ್ಕೊಬ್ಬನನ್ನು ನಾನೇ ಕರೆದುಕೊಂಡುಕೊಂಡು ಬರುತ್ತಿದ್ದೆ...

ಕೈಗಳಿಂದ ಕಿವಿ ಮುಚ್ಚಿಕೊಂಡೆ... ಎಷ್ಟು ಅಸಹ್ಯ!.'

'ರಂಗಸ್ವಾಮಿ ರೂಮಿನಿಂದ ಸೀರೆನೋ. ದುಪ್ಪಟ್ಟಾನೋ ತೊಗೊಂಡು ಬಾ



## ಇಲ್ಲಿಯವರೆಗೆ

ಕೊನೆಗೂ ಮನೆ ಬಿಟ್ಟು ಹೋಗುವ ದೃಢನಿರ್ಧಾರ ಮಾಡಿದ್ದ ಆಕೆ ವಿಶ್ವಾಸನ ಜೊತೆಯಲ್ಲಿ ಮುಂಬಯಿಗೆ ಪಯಣ ಬೆಳೆಸುತ್ತಾಳೆ. ಅಲ್ಲಿ ನರ್ಸಿಂಗ್ ಹೋಂ ಒಂದರಲ್ಲಿ ರಿಸೆಪ್ಷನಿಸ್ಟ್ ಆಗಿ ಕೆಲಸ ಸೇರಿಕೊಳ್ಳುವ ನಿರ್ಧಾರ ಮಾಡುತ್ತಾಳೆ. ಈ ಮಧ್ಯೆ ಆಕೆಯ ಪತಿ ವಿಕ್ರಮ್ 'ಹೆಂಡತಿ ಕಾಣೆಯಾಗಿದ್ದಾಳೆ' ಎಂದು ಪೊಲೀಸ್ ಕಂಪ್ಲೇಂಟ್ ಕೊಡುತ್ತಾನೆ. ಎಲ್ಲ ಟೀವಿ ಚಾನೆಲ್‌ನವರು ಈ ಸುದ್ದಿಯನ್ನು ಬ್ರೇಕಿಂಗ್ ನ್ಯೂಸ್ ಎಂದು ಪ್ರಸಾರ ಮಾಡುತ್ತವೆ. ಈ ಸುದ್ದಿ ವಿಶ್ವಾಸ್ ಕಿವಿಗೂ ಬಿದ್ದು ಆಕೆಯನ್ನು ಕೆಲಸಕ್ಕೆ ಸೇರದೆ ಹೋಟೆಲ್ ರೂಮ್‌ನಲ್ಲೇ ಇರುವಂತೆ ಹೇಳುತ್ತಾನೆ. 'ನೀನು ಇಲ್ಲೇ ಇರು, ನಾನು ವಾಪಸ್ ಹೋಗುತ್ತೇನೆ' ಎಂದು ವಿಶ್ವಾಸ್ ಹೇಳುತ್ತಾನೆ. ಒಂದು ರೀತಿಯ ಟೆನ್ಶನ್ ವಾತಾವರಣ ನಿರ್ಮಾಣವಾಗುತ್ತದೆ.

ಪೊಲೀಸ್ ಕಮಿಷನರ್‌ಗೆ ಫೋನ್ ಮಾಡು. ತಲೆಕೆಡಿಸಿ, ಮುಂಬೈಗೆ ಓಡಿಸಿ ಕೊಂಡು ಬಂದ ಆ ಸೂಳೇ ಮಗ ಎರಡು ದಿನ ಅನುಭವಿಸಿ, ಕೈ ಕೊಟ್ಟು ಹೋಗಿಬಿಟ್ಟಿದ್ದಾನೆ... ಅದಕ್ಕೆ ವಿಕ್ರಂ ಹಳ್ಳಿಮನೆಯವರ ಪತ್ನಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ... ಅಂತ ಹೇಳು...'

'ಸರ್..'

ಅವರ ಕೈಗಳು ನನ್ನ ಕುತ್ತಿಗೆಯ ಸುತ್ತಾ ಆವರಿಸಿಕೊಂಡಿತ್ತು...

'ಮೊಬೈಲ್ ಫೋನಿನಲ್ಲಿ ತನ್ನ ಗಂಡನಿಗೆ, ಕ್ಷಮಿಸಿ ನಿಮ್ಮೊಡನೆ ಬಾಳುವೆ ಮಾಡುವ ಪುಣ್ಯ ನಾನು ಮಾಡಿರಲಿಲ್ಲ... ಮಕ್ಕಳನ್ನು ಚೆನ್ನಾಗಿ ನೋಡಿಕೊಳ್ಳಿ... ನನ್ನ ಕ್ಷಮಿಸಿ ಎಂದು ಮೆಸೇಜ್ ಕಳಿಸಿದ್ದಾರೆ..... ಅಂತ ಹೇಳು ಮೊದಲೇ ಹೇಳಿದಂತೆ ಅರ್ಧ ಗಂಟೇಲಿ... ಫ್ಲಾಟಿಗೆ ಬರಬಹುದು ಅಂತ ಹೇಳು... ಹೂಂ ಅವಳ ಮೊಬೈಲಿನಲ್ಲಿ ನಾನು ಹೇಳಿದ್ದು ಟೈಪ್ ಮಾಡು...'

'ನಿನ್ನ ಕರ್ಚೀಫ್ ಕೊಡು... ಚರ್ಮದ ಮೇಲೂ ಬೆರಳಿನ ಗುರುತು ಬೀಳಬಹುದೇನೋ..... ಇಲ್ಲ.. ಆ ದುಪ್ಪಟ್ಟಾವೇ ಕೊಡು...'

ಎಷ್ಟು ನಿಧಾನವಾಗಿ ನೆಮ್ಮದಿಯಾಗಿ ಮಾತಾಡುತ್ತಿದ್ದಾರೆ... ದುಪ್ಪಟ್ಟಾ... ನನ್ನದೇ ಕೆಂಪು ದುಪ್ಪಟ್ಟಾವನ್ನು ನನ್ನ ಕುತ್ತಿಗೆಯ ಸುತ್ತಾ ಸುತ್ತಿ ಕುಣಿಕೆ ಹಾಕುತ್ತಿದ್ದಾರೆ. ಗಟ್ಟಿಯಾಗಿ ಎಳೆದರೆ ಆಯಿತು, ವಿರೋಧಿಸಬೇಕು. ಆದರೆ ನನ್ನ ಕೈಗಳು ವಿರೋಧಿಸಲು, ನನ್ನನ್ನು ಉಳಿಸಲು, ಪ್ರಯತ್ನವೇ ಪಡದೆ, ಆಗಲೇ ಜೀವ ಕಳೆದುಕೊಂಡು, ನನ್ನ ಇಕ್ಕೆಲದಲ್ಲಿ ಜೋತುಬಿದ್ದಿವೆ. ಕಾಲುಗಳಾದರೂ ಅವರನ್ನು ಒದ್ದು ದೂರ ಮಾಡಲು ಪ್ರಯತ್ನಪಡಬಹುದೇನೋ..... ಆದರೆ ಅವುಗಳಲ್ಲಿ ಶಕ್ತಿಯೇ ಇಲ್ಲ. ದನಿಯೆತ್ತಿ ಚೀರಿ, ಕಿರುಚಿ, ಅಕ್ಕಪಕ್ಕದ ಫ್ಲಾಟುಗಳಲ್ಲಿ ಇರುವವರನ್ನು ಕರೆಯಬಹುದೇನೋ.... ಆದರೆ ದನಿ?.. ದನಿಯೇ ಇಲ್ಲ... ಕಿರುಚಲು ಆಗದಿದ್ದರೂ ಮೆಲುದನಿಯಲ್ಲಿ ಇವರನ್ನು ಬೇಡಿಕೊಳ್ಳಬಹುದೇನೋ... ಜೀವ ಉಳಿಸಿ ಎಂದು... ಆದರೆ.. ಆದರೆ... ಜೀವ ಉಳಿಸಿಕೊಳ್ಳಬೇಕು ಎಂಬ ಹಂಬಲವೇ ಇಲ್ಲ..

ಹೋಗಲಿ ಈ ಜೀವ... ನನ್ನ ಸಾವಿನ ಸೂತಕ ಇವರ ಮನಕ್ಕೆ, ಮನೆಗೆ ಅಂಟಲಿ... ಇವರ ಕೈಗಳಲ್ಲಿ ನನ್ನ ರಕ್ತದ ಕಲೆಯಿರಲಿ.... ಸ್ತ್ರೀ ಹತ್ಯೆ ಪಾಪದ ರೌರವ ನರಕ ಇವರ ಪಾಲಿಗಿರಲಿ.

ಕಣ್ಣು ಮುಚ್ಚಿದೆ. ಸಾವು ಇಷ್ಟು ಸುಲಭವೇ?.. ಇನ್ನೊಂದೆರಡು ನಿಮಿಷ... ಇವರು ಜೋರಾಗಿ ಬಿಗಿದರೆ... ಉಸಿರು ನಿಂತು ಹೋಗುತ್ತದೆ ಅಷ್ಟೇ. ಇವರು ಹೇಳಿದಂತೆಯೇ ಕಥೆ... ನನ್ನ ಹೆಸರು ಕುಲಗೆಡಿಸಿ, ನನ್ನಂತೆ ಸ್ವಾಭಿಮಾನದಿಂದ